ಸಂಖ್ಯೆ:ಕೆಎಸ್ಎಟಿ/ಸಿಬ್ಬಂದಿ(1)/ಬಿ.ಬಿ/ಡಿಇಪಿ-ಎಸ್‌ಟಿಎಫ್/03/2018 ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ,
6ನೇ ಮತ್ತು 7ನೇ ಮಹಡಿ, ಕಂದಾಯ ಭವನ,
ಕೆಂಪೇಗೌಡ ರಸ್ತೆ, ಬೆಂಗಳೂರು – 560 009.

**ದಿನಾಂಕ: 01/02/2018**

# ಸುತ್ತೋಲೆ

ವಿಷಯ:– ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಬೆಳಗಾವಿ ಪೀಠದ ಕಛೇರಿಯಲ್ಲಿ ಕಾರ್ಯನಿರ್ವಹಿಸಲು ಸಿದ್ಧರಿರುವ ಅಧಿಕಾರಿ/ನೌಕರರು ತಮ್ಮ ಸಮ್ಮತಿಯನ್ನು ಸೂಚಿಸುವ ಕುರಿತು.

ಉಲ್ಲೇಖ:
1) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್/15/ಎಸ್ಎಟಿ/2015 ದಿನಾಂಕ: 13/08/2015.
2) ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ/15/ಸೇಆನ್ಯಾ/2015, ದಿನಾಂಕ: 26/02/2016.
3) ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ/43/ಸೇಆನ್ಯಾ/2016, ದಿನಾಂಕ: 30/06/2016.

* * * * *

ಕರ್ನಾಟಕ ಸರ್ಕಾರವು ಉಲ್ಲೇಖ (1) ರ ತನ್ನ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಬೆಳಗಾವಿ ಪೀಠವನ್ನು ಸ್ಥಾಪಿಸಿದೆ. ಸದರಿ ಪೀಠವು ಬೆಳಗಾವಿ ನಗರದಲ್ಲಿ ಶೀಘ್ರದಲ್ಲಿಯೇ ಕಾರ್ಯಾರಂಭ ಮಾಡಲಿದೆ. ಉಲ್ಲೇಖ (2) ಮತ್ತು (3) ರಲ್ಲಿನ ಆದೇಶಗಳಲ್ಲಿ ಮೇಲ್ಕಂಡ ಪೀಠಕ್ಕೆ ಅಗತ್ಯವಿರುವ ವಿವಿಧ ವೃಂದದ ಹುದ್ದೆಗಳನ್ನು ಸರ್ಕಾರವು ಮಂಜೂರು ಮಾಡಿದೆ. ಸದರಿ ಹುದ್ದೆಗಳನ್ನು ನೇರ ನೇಮಕಾತಿ, ಪದೋನ್ನತಿ, ನಿಯೋಜನೆ, ಅನ್ಯ ಪರ ಸೇವೆ ಮತ್ತು ಹೊರ–ಗುತ್ತಿಗೆ ಆಧಾರದ ಮೇಲೆ ಶಾಶ್ವತವಾಗಿ/ಸುತ್ತು ಸರದಿ ಮೇರೆಗೆ ತುಂಬಬೇಕಾಗಿರುತ್ತದೆ. ಆದ್ದರಿಂದ, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಬೆಳಗಾವಿ ಪೀಠದಲ್ಲಿ ಶಾಶ್ವತವಾಗಿ/ಸುತ್ತು ಸರದಿ ಮೇರೆಗೆ ಕಾರ್ಯನಿರ್ವಹಿಸಲು ಸಿದ್ಧರಿರುವ ಅಧಿಕಾರಿ/ಸಿಬ್ಬಂದಿ ವರ್ಗದವರು ಈ ಸುತ್ತೋಲೆ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ತಮ್ಮ ಸಮ್ಮತಿಯನ್ನು ಲಿಖಿತ ರೂಪದಲ್ಲಿ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

**'ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ'**

1/2

ವಿಲೇಖನಾಧಿಕಾರಿ,
ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ,
ಬೆಂಗಳೂರು.

01/02/18

ರಿಗೆ:–

1. ಸನ್ಮಾನ್ಯ ಅಧ್ಯಕ್ಷರು, ಸದಸ್ಯರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಇವರಿಗೆ ಆಪ್ತ ಕಾರ್ಯದರ್ಶಿಗಳ ಮುಖಾಂತರ.
2. ವಿಲೇಖನಾಧಿಕಾರಿಯವರಿಗೆ, ಆಪ್ತಕಾರ್ಯದರ್ಶಿಯವರ ಮೂಲಕ.
3. ಉಪ–ವಿಲೇಖನಾಧಿಕಾರಿಗಳು, ಕೆ.ಎಸ್.ಎ.ಟಿ. ಬೆಂಗಳೂರು.
4. ಸಹಾಯಕ ವಿಲೇಖನಾಧಿಕಾರಿಗಳು, ಕೆ.ಎಸ್.ಎ.ಟಿ. ಬೆಂಗಳೂರು.
5. ಎಲ್ಲಾ ಸಿಬ್ಬಂದಿ ವರ್ಗದವರಿಗೆ, ಶಾಖಾಧಿಕಾರಿಗಳು/ಆಪ್ತ ಕಾರ್ಯದರ್ಶಿ–ಕಂ–ತೀರ್ಪುಬರಹಗಾರರು/ ನ್ಯಾಯಾಂಗಣಾಧಿಕಾರಿಗಳು/ ಶಾಖಾ ಮುಖ್ಯಸ್ಥರು, ಕೆ.ಎಸ್.ಎ.ಟಿ. ಬೆಂಗಳೂರು. ಇವರ ಮೂಲಕ.
6. ಕಛೇರಿಯ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸುವ ಸಲುವಾಗಿ. 7. ಬಿಡಿಪ್ರತಿ.

*ಎಂಆರ್